ಶ್ರೀ ಎಸ್.ಎಂ. ಕೃಷ್ಣ : ಅದು ಆಯಾಯ ಸದಸ್ಯರ ಮೇಲೆ ನಿಲ್ಲುತ್ತದೆ. ಅದು ಅಯಾಯ ಯೋಜನೆಗಳ ಮೇಲೆ ನಿಲ್ಲುತ್ತದೆ ಸ್ವಾಮಿ.

ಬಸವ ಕಲ್ಯಾಣದಲ್ಲಿ ಸಿವಿಲ್ ಜಡ್ಜ್ ನ್ಯಾಯಾಲಯವು ಕಾರ್ಯ ನಿರ್ವಹಿಸುವ ಬಗ್ಗೆ

193 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೀದರ್ ಜಿಲ್ಲೆಯ ಬಸವಕಲ್ಯಾಣದ ಸಿವಿಲ್ ಜಡ್ಜ್ ನ್ಯಾಯಾಲಯವು ವಾರದಲ್ಲಿ ನಾಲ್ಕು ದಿನಗಳು ಕಾರ್ಯನಿರ್ವಹಿಸುತ್ತಿರುವುದು ನಿಜವೆ?*

ಆ) *ಹಾಗಿದ್ದಲ್ಲಿ, ಈ ನ್ಯಾಯಾಲಯವು ಭಾಲ್ಕಿಯಲ್ಲಿಯೂ ಕಾರ್ಯ ನಿರ್ವಹಿಸುವಂತೆ ವ್ಯವಸ್ಥೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;*

ಇ) *ಭಾಲ್ಕಿಯಲ್ಲಿ ನ್ಯಾಯಾಲಯವು ಕಾರ್ಯ ನಿರ್ವಹಿಸುತ್ತಿರುವುದು ಬಸವಕಲ್ಯಾಣ ಮತ್ತು ಹುಮ್ನಾಬಾದ್ ತಾಲ್ಲೂಕುಗಳ ಸಾರ್ವಜನಿಕರಿಗೂ ಮತ್ತು ಪ್ರಿಸೈಡಿಂಗ್ ಅಧಿಕಾರಿಗಳಿಗೂ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ ಕಕ್ಷಿದಾರರ ಹಿತದೃಷ್ಟಿಯಿಂದ ಬಸವಕಲ್ಯಾಣದ ನ್ಯಾಯಾಲಯವನ್ನು ಬಸವಕಲ್ಯಾಣದಲ್ಲಿಯೇ ಸಂಪೂರ್ಣವಾಗಿ ನಡೆಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ?*

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು

ಆ) ಹೌದು, ವಾರದಲ್ಲಿ ಎರಡು ದಿನಗಳು.

ಇ) ಹೌದು

ಈ) ಅಂತಹ ಯಾವ ಪ್ರಸ್ತಾವನೆಯೂ ಸರ್ಕಾರದ ಮುಂದಿಲ್ಲ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು : ಮಾನ್ಯ ಅಧ್ಯಕ್ಷರೇ, ಬಸವಕಲ್ಯಾಣದಲ್ಲಿ ಹೋದವರ್ಷದಲ್ಲಿ ಸಿವಿಲ್ ನ್ಯಾಯಾಲಯವು ಪ್ರಾರಂಭವಾಗಿದ್ದುದು ತಮಗೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಮಾನ್ಯ ಮಂತ್ರಿಗಳಿಗೆ ಕೂಡ ಈ ವಿಷಯ ಬಗ್ಗೆ ಸವಿಸ್ತಾರವಾಗಿ ಸಾಕಷ್ಟು ಮಾಹಿತಿ ಇದೆ. ಅದು ಆದಮೇಲೆ ನಮ್ಮಲ್ಲಿ ಒಂದು ವಾರ ಸಿವಿಲ್ ಕೋರ್ಟು ನಡೆಯುತ್ತಿತ್ತು. ಆದಾದ ಎರಡು ತಿಂಗಳಲ್ಲಿ ಎರಡರಿಂದ ನಾಲ್ಕು ದಿವಸ ಬಸವಕಲ್ಯಾಣದಲ್ಲಿ, ಮತ್ತೆರಡು ದಿವಸ ಭಾಲ್ಕಿಯಲ್ಲಿ ಮಾಡಬೇಕೆಂದು ಸರ್ಕಾರದವರು ನಿರ್ಣಯ ತೆಗೆದುಕೊಂಡಿದ್ದಾರೆ. ಇದರಿಂದ ಹುಮ್ನಾಬಾದ್, ಬಸವಕಲ್ಯಾಣ ಮತ್ತು ಭಾಲ್ಕಿ ಈ ವಿಭಾಗಗಳಿಂದ ಬರತಕ್ಕಂಥ ಸಾಮಾನ್ಯ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಇದರ ಸಲುವಾಗಿ ನಾನು ಕೇಳಿದ ಪ್ರಶ್ನೆಗೆ ಸಮರ್ಪಕವಾದ ಉತ್ತರ ಮಾನ್ಯ ಮಂತ್ರಿಗಳಿಂದ ನನಗೆ ದೊರೆತಿಲ್ಲ. ನಾನು ಈ ಸಂದರ್ಭದಲ್ಲಿ ಇಷ್ಟೇ ಅವರಿಂದ ಕೇಳುತ್ತಿದ್ದೇನೆ, ಅದೇನೆಂದರೆ, ನ್ಯಾಯಾಲಯಗಳಿಂದ ಜನರಿಗೆ ಅನುಕೂಲವಾಗಬೇಕು ಎನ್ನುವ ಉದ್ದೇಶವನ್ನು ತಾವು ಇಟ್ಟುಕೊಂಡಿದ್ದೀರಿ. ಆದರೆ ಹೀಗೆ ಮಾಡುವುದರಿಂದ ಮೂರೂ ತಾಲ್ಲೂಕಿನ ಜನರಿಗೆ ತೊಂದರೆಯಾಗುತ್ತಿದೆ. ಇದರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಹೇಗೆ? ಇದು ಒಂದು. ಎರಡನೇಯದು ನಮ್ಮದು ಹೆಡ್‌ಕ್ವಾರ್ಟರ್ಸ್. ಇಲ್ಲಿ ಸಿವಿಲ್ ಕೋರ್ಟ್

ಇದ; ಸೆರ್ವೆ ಕಚೇರಿ ಇದೆ, ಕಂದಾಯ ಉಪವಿಭಾಗ ಇದೆ. ಎಲ್ಲಾ ಸಬ್ ಡಿವಿಜನ್‌ಗಳು ಬಸವಕಲ್ಯಾಣದಲ್ಲಿ ಇದೆ. ಈಗ ಬಸವಕಲ್ಯಾಣಕ್ಕೆ ಅಷ್ಟೇ ಅಲ್ಲ, ಮೂರೂ ತಾಲ್ಲೂಕಿನ ಜನರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ತಾವು ಭಾಲ್ಕಿಯಲ್ಲಿ ಏನು ಎರಡು ದಿನದ ಶಿಫ್ಟ್ ಇದೆ, ಅದನ್ನು ಬದಲಾವಣೆ ಮಾಡಿ ಬಸವಕಲ್ಯಾಣದಲ್ಲೇ ಒಂದುವಾರ ಕಂಟಿನ್ಯೂ ಮಾಡುವ ಸಲುವಾಗಿ ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರೋ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಈ ಕೋರ್ಟು ಸ್ಥಾಪನೆ ಮಾಡುವುದು ಮತ್ತು ಯಾವ್ಯಾವ ತಾಲ್ಲೂಕು ಮತ್ತು ಊರುಗಳು ಕೋರ್ಟಿನ ಪರಿಸರಕ್ಕೆ ಬರಬೇಕು ಎಂಬುದು ನಮ್ಮ ಉಚ್ಚನ್ಯಾಯಾಲಯದ ಅಭಿಪ್ರಾಯ ಕೇಳಿ ನಾವು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿರುವ ಕಷ್ಟಗಳು ನಮಗೆ ಗೊತ್ತಿದೆ. ಇದರ ಬಗ್ಗೆ ನಾವು ಒಮ್ಮೆ ಉಚ್ಚನ್ಯಾಯಾಲಯಕ್ಕೆ ತಿಳಿಸಿದ್ದೆವು. ಸಧ್ಯಕ್ಕೆ ಇದು ಬೇಕಿಲ್ಲ, ಈಗ ಇರುವ ವ್ಯವಸ್ಥೆಯೇ ಮುಂದುವರೆಯಲಿ ಎಂದು ಅವರು ಉತ್ತರ ಬರೆದಿದ್ದಾರೆ. ಪುನಃ ಉಚ್ಚ ನ್ಯಾಯಾಲಯಕ್ಕೆ ಬರೆದು ತಾವು ಹೇಳಿದ ಸಮಸ್ಯೆಗಳು ಏನಿವೆ, ಅದರಿಂದ ಈ ಬೇಡಿಕೆ ಏನಿದೆ, ಅದನ್ನು ಮಂಜೂರು ಮಾಡುವುದು ಅವಶ್ಯಕತೆ ಇದೆ ಎಂದು ನಾವು ಉಚ್ಚನ್ಯಾಯಾಲಯಕ್ಕೆ ತಿಳಿಸುತ್ತೇವೆ. ಅಲ್ಲಿಂದ ಒಪ್ಪಿಗೆ ಬಂದನಂತರ ನಾವು ತೀರ್ಮಾನ ಮಾಡೋಣ.

ಶ್ರೀ ಬಸವರಾಜಪಾಟೀಲ್ ಅಟ್ಟೂರು : ಸನ್ಮಾನ್ಯ ಅಧ್ಯಕ್ಷರೇ, ಇದು ಏನಾಗಿದೆ ಎಂದರೆ, ನಮ್ಮಲ್ಲಿ ಮೊದಲು ಆರು ದಿನ ನಡೆಯುತ್ತಾ ಇತ್ತು. ಅದನ್ನು ಬದಲಾವಣೆ ಮಾಡಿದ್ದಾರೆ. ಇದನ್ನು ಉದ್ದೇಶಪೂರ್ವಕವಾಗಿ ಈ ಬದಲಾವಣೆಯನ್ನು ಮಾಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಸ್ವತಃ ಚೀಫ್ ಜಸ್ಟೀಸ್‌ಅವರೇ ಬಂದು ಉದ್ಘಾಟನೆ ಮಾಡಿದ್ದಾರೆ. ಆದರೆ ಆದಾದ ಎರಡು ತಿಂಗಳಲ್ಲೇ ದಿಢೀರನೆ ಬದಲಾವಣೆ ಮಾಡಿದ್ದರಿಂದ ಅಲ್ಲಿರುವ ಎಲ್ಲಾ ರೈತರಿಗೆ, ತೊಂದರೆಯಾಗಿದೆ. ಹಿಂದೆ ಕೂಡ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೇನೆ. ತಾವು ದಯವಿಟ್ಟು ಹೈಕೋರ್ಟಿಗೆ ಬರೆಯಿರಿ. ತಾವು ಹೈಕೋರ್ಟಿಗೆ ಬರೆದ ಮೇಲೆ ನಿಖರವಾದ ಸಮಯ ಏನಾದರೂ ಇದೆಯಾ ಇದನ್ನು ಬಸವಕಲ್ಯಾಣದಲ್ಲಿ ಪುನಃ ಪ್ರಾರಂಭ ಮಾಡುವುದಕ್ಕೆ? ಮತ್ತೊಂದು ಪ್ರಶ್ನೆ ಏನೆಂದರೆ, ಇಲ್ಲಿರತಕ್ಕಂಥ ನ್ಯಾಯಾಧೀಶರಿಗೆ ಭಾಲ್ಕಿಗೆ ಹೋಗಬೇಕಾದರೆ ಬಸ್ಸಿನ ವ್ಯವಸ್ಥೆ ಸರಿಯಾಗಿಲ್ಲ. ಬೆಳಿಗ್ಗೆ ಅವರು ಹೋಗಬೇಕಾದರೆ ಬಸ್ಸಿನ ತೊಂದರೆ ಇದೆ. ನ್ಯಾಯಾಧೀಶರಿಗೂ ತೊಂದರೆಯಾಗುತ್ತಿದೆ ಮತ್ತು ಕಚೇರಿಯ ಕೆಲಸಗಾರರಿಗೂ ಕೂಡ ತೊಂದರೆಯಾಗುತ್ತಿದೆ. ಆದ್ದರಿಂದ ತಾವು ಹೈಕೋರ್ಟಿಗೆ ಪತ್ರ ಬರೆದು ಈ ಮೂರೂ ತಾಲ್ಲೂಕುಗಳ ಜನರ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಸದಸ್ಯರು ಹೇಳಿರುವ ಸಲಹೆಗಳನ್ನು ಪರಿಶೀಲನೆ ಮಾಡಿ ಅವರ ಸ್ಥಳದಲ್ಲಿ ಕೋರ್ಟಿನ ಅನುಕೂಲತೆ ಬರುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ. ಅಷ್ಟೇ ಪ್ರಯತ್ನವನ್ನು ತಾವೂ ಮಾಡಿ ಮಾನ್ಯ ಮಂತ್ರಿಗಳಾದ ರಂಗನಾಥ್ ಅವರು ಇದರ ಬಗ್ಗೆ ಯೋಚನೆ ಮಾಡುವುದಕ್ಕೆ ಹೇಳಬೇಕು.

ವಿದ್ಯುತ್ ಬಾಕಿ ಬಿಲ್ಲುಗಳು

143 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಗ್ರಾಹಕರಿಂದ ಸಂಘ ಸಂಸ್ಥೆಗಳಿಂದ ಹಾಗೂ ಕಾರ್ಖಾನೆಗಳಿಂದ ಇದುವರೆವಿಗೂ ಬರಬೇಕಾಗಿರುವ ಬಾಕಿ ಹಣ ಎಷ್ಟು?